# ಜಿಲ್ಲಾ ಪಂಚಾಯತ್, ದಾವಣಗೆರೆ

## ಲೋಕಿಕೆರೆ ರಸ್ತೆ, ದೂರದರ್ಶನ ಕೇಂದ್ರದ ಎದುರು, ದಾವಣಗೆರೆ

ದೂರವಾಣಿ ಸಂಖ್ಯೆ: 08192-261485, 261825, 260016, 262203, 1800-425-2203

ಇ-ಮೇಲ್ : ceo-zp-kada@nic.in ವೆಬ್‌ಸೈಟ್: www.zpdavangere.kar.nic.in


ಸಂಖ್ಯೆ:ಜಿಪಂದಾ:ಅಭಿ(3).ಉಖಾಯೋ.ನೇಮಕಾತಿ/2023-24 ದಿನಾಂಕ: 07-08-2023.

## ನೇಮಕಾತಿ ಅಧಿಸೂಚನೆ

ವಿಷಯ: ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ದಾವಣಗೆರೆ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ: ಮಾನ್ಯ ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು ಇವರ ಪತ್ರ ಸಂ. ಗ್ರಾಅಪ.ಉಖಾಯೋ.50/2021, ದಿನಾಂಕ: 04.03.2021.

* * *

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಅಗತ್ಯವಿರುವ ಸಿಬ್ಬಂದಿಗಳನ್ನು ಹೊರಗುತ್ತಿಗೆ ಮೇಲೆ ನೇಮಕಾತಿ ಮಾಡಿಕೊಳ್ಳಲು ದಾವಣಗೆರೆ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಆದೇಶ ಹೊರಡಿಸಿ ಆದೇಶಿಸಲಾಗಿದೆ. ಖಾಲಿ ಇರುವ ಹುದ್ದೆಗಳ ವಿವರಗಳು ಹಾಗೂ ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ ಮತ್ತು ಮಾಸಿಕ ಸಂಭಾವನೆ ವಿವರಗಳು ಈ ಕೆಳಗಿನಂತಿರುತ್ತವೆ.

| ಕ್ರ ಸಂ | ಹುದ್ದೆಯ ಹೆಸರು | ಹುದ್ದೆಯ ಸಂಖ್ಯೆ | ಕನಿಷ್ಠ ವಿದ್ಯಾರ್ಹತೆ | ಅಪೇಕ್ಷಣೀಯ | ವಯೋಮಿತಿ** | ಮಾಸಿಕ ಸಂಭಾವನೆ |
|---|---|---|---|---|---|---|
| 01 | ತಾಂತ್ರಿಕ ಸಹಾಯಕ (ಸಿವಿಲ್) | **04** | B.E (Civil) ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 2-3 ವರ್ಷಗಳ ಅನುಭವ | M.Tech. Civil / Structure | 21-40 ವರ್ಷ | ರೂ. 28,000/- + ಪ್ರ.ಭತ್ಯೆ ಗರಿಷ್ಠ ರೂ. 2000/- |
| 02 | ತಾಂತ್ರಿಕ ಸಹಾಯಕ (ಕೃಷಿ) | **01** | B.Sc (Agri.) ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 2-3 ವರ್ಷಗಳ ಅನುಭವ | MSc (Agri) | 21-40 ವರ್ಷ | ರೂ. 28,000/- + ಪ್ರ.ಭತ್ಯೆ ಗರಿಷ್ಠ ರೂ. 2000/- |
| 03 | ತಾಂತ್ರಿಕ ಸಹಾಯಕ (ತೋಟಗಾರಿಕೆ) | **06** | B.Sc (Horticulture) ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 2-3 ವರ್ಷಗಳ ಅನುಭವ | MSc(Horticulture) | 21-40 ವರ್ಷ | ರೂ. 28,000/- + ಪ್ರ.ಭತ್ಯೆ ಗರಿಷ್ಠ ರೂ. 2000/- |
| 04 | ತಾಂತ್ರಿಕ ಸಹಾಯಕ (ಅರಣ್ಯ) | **02** | B.Sc (Forestry) ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 2-3 ವರ್ಷಗಳ ಅನುಭವ | MSc (Forestry) | 21-40 ವರ್ಷ | ರೂ. 28,000/- + ಪ್ರ.ಭತ್ಯೆ ಗರಿಷ್ಠ ರೂ. 2000/- |
| 05 | ತಾಂತ್ರಿಕ ಸಹಾಯಕ (ರೇಷ್ಮೆ) | **01** | B.Sc (Sericulture) ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ 2-3 ವರ್ಷಗಳ ಅನುಭವ | MSc (Sericulture) | 21-40 ವರ್ಷ | ರೂ. 28,000/- + ಪ್ರ.ಭತ್ಯೆ ಗರಿಷ್ಠ ರೂ. 2000/- |
| 06 | ಆಡಳಿತ ಸಹಾಯಕರು * | **06** | B.Com ಕಂಪ್ಯೂಟರ್‌ನಲ್ಲಿ ಕನ್ನಡ & ಇಂಗ್ಲೀಷ್ ಟೈಪಿಂಗ್ ಪರಿಣಿತಿ, MS world, MS Excel, MS Ppt ಸೇರಿದಂತೆ ಉತ್ತಮ ಜ್ಞಾನ ಹೊಂದಿರಬೇಕು. | | 21-40 ವರ್ಷ | ರೂ. 22,000/- |

** ಪ್ರಾಯೋಗಿಕ ಪರೀಕ್ಷೆ ಮೂಲಕ ಅಂತಿಮ ಆಯ್ಕೆ ಮಾಡಲಾಗುವುದು.*

*** ದಿನಾಂಕ: **01.08.2023**ಕ್ಕೆ ಅನ್ವಯಿಸುವಂತೆ ಅಭ್ಯರ್ಥಿಗೆ ಕನಿಷ್ಠ 21 ವರ್ಷ ಹಾಗೂ ಗರಿಷ್ಠ 40 ವರ್ಷ ಇರಬೇಕು.*

ಪುಟ 2ಕ್ಕೆ



Scanned with OKEN Scanner

# ಜಿಲ್ಲಾ ಪಂಚಾಯತ್, ದಾವಣಗೆರೆ

**ಲೋಕಿಕೆರೆ ರಸ್ತೆ, ದೂರದರ್ಶನ ಕೇಂದ್ರದ ಎದುರು, ದಾವಣಗೆರೆ**

ದೂರವಾಣಿ ಸಂಖ್ಯೆ: 08192-261485, 261825, 260016, 262203, 1800-425-2203

ಇ-ಮೇಲ್ : ceo-zp-kada@nic.in ವೆಬ್‌ಸೈಟ್: www.zpdavangere.kar.nic.in




- ಅರ್ಜಿಯನ್ನು ಸಲ್ಲಿಸಲು ದಿನಾಂಕ: 10.08.2023 ರಿಂದ 24.08.2023ರ ವರೆಗೆ ಅವಕಾಶ ಕಲ್ಪಿಸಲಾಗಿದೆ.
- ಅರ್ಜಿಯನ್ನು ಆನ್‌ಲೈನ್ ಮೂಲಕ ದಾವಣಗೆರೆ ಜಿಲ್ಲೆಯ ಅಧಿಕೃತ ವೆಬ್‌ಸೈಟ್ **davanagere.nic.in** ನಲ್ಲಿ ಮಾತ್ರ ಸಲ್ಲಿಸತಕ್ಕದ್ದು ಹಾಗೂ ನೇಮಕಾತಿ ಅಧಿಸೂಚನೆ ಹಾಗೂ ನಂತರದಲ್ಲಿ ಮೆರಿಟ್ ಪಟ್ಟಿ, ಶಾರ್ಟ್ ಲಿಸ್ಟ್, ಆಯ್ಕೆ ಪಟ್ಟಿಯ ವಿವರಗಳನ್ನು ವೀಕ್ಷಿಸಬಹುದಾಗಿದೆ.
- ಅರ್ಜಿಯನ್ನು ದಾವಣಗೆರೆ ಜಿಲ್ಲೆಯ ಅಧಿಕೃತ ವೆಬ್‌ಸೈಟ್ **davanagere.nic.in** ನಲ್ಲಿ **ನೇಮಕಾತಿ** ವಿಭಾಗದಲ್ಲಿ ದಾಖಲಾತಿಗಳೊಂದಿಗೆ ಸಲ್ಲಿಸತಕ್ಕದ್ದು ಹಾಗೂ ಅರ್ಜಿಯನ್ನು ಸಂಪೂರ್ಣವಾಗಿ ಸಲ್ಲಿಸಿದ ನಂತರ ಪಡೆದ ಸ್ವೀಕೃತಿ ಪತ್ರದ ಪ್ರತಿಯೊಂದಿಗೆ ದಾಖಲೆಗಳನ್ನು ಲಗತ್ತಿಸಿ ಜಿಲ್ಲಾ ಪಂಚಾಯತ್ ಕಚೇರಿಯ ನರೇಗಾ ವಿಭಾಗ, ಕೊಠಡಿ ಸಂ. 111 ಗೆ ದಿನಾಂಕ: 24.08.2023ರೊಳಗೆ ಸಲ್ಲಿಸಿ, ಸ್ವೀಕೃತಿ ಪಡೆಯುವುದು.

**ಆಯ್ಕೆ ವಿಧಾನ :**

- ಸ್ವೀಕರಿಸಿದ ಅರ್ಜಿಗಳ ವಿವರಗಳನ್ನು ಪರಿಶೀಲಿಸಿ ಮೆರಿಟ್ ಆಧಾರದಲ್ಲಿ ಅಭ್ಯರ್ಥಿಗಳನ್ನು ಹೆಚ್ಚು ಅಂಕದಿಂದ ಕಡಿಮೆ ಅಂಕದ ಆಧಾರದಲ್ಲಿ (Highest to lower order of Merit) ಒಟ್ಟು **100** ಅಂಕಗಳಿಗೆ ಕೆಳಗಿನಂತೆ ಮೆರಿಟ್ ಪಟ್ಟಿಯನ್ನು ತಯಾರಿಸಿಕೊಳ್ಳಲಾಗುವುದು.
  - ಕನಿಷ್ಠ ವಿದ್ಯಾರ್ತಹೆತೆ ಪದವಿಗೆ – 60 ಅಂಕಗಳು (ಉದಾಹರಣೆಗೆ ಪದವಿಯಲ್ಲಿ ಶೇ. 70 ಅಂಕ ಪಡೆದಿದ್ದಲ್ಲಿ, ಆ ಅಭ್ಯರ್ಥಿಗೆ 70*0.60 = **42** ಅಂಕ ನೀಡಲಾಗುವುದು).
  - ಸ್ನಾತಕೋತ್ತರ ಪದವಿ ವಿದ್ಯಾರ್ಹತೆಗೆ – 20 ಅಂಕಗಳು (ಉದಾಹರಣೆಗೆ ಪದವಿಯಲ್ಲಿ ಶೇ. 70 ಅಂಕ ಪಡೆದಿದ್ದಲ್ಲಿ, ಆ ಅಭ್ಯರ್ಥಿಗೆ 70*0.20 = **14** ಅಂಕ ನೀಡಲಾಗುವುದು).
  - ಸಂಬಂಧಿಸಿದ ಕಾರ್ಯ ಕ್ಷೇತ್ರದಲ್ಲಿ 36 ತಿಂಗಳು ಅಥವಾ ಹೆಚ್ಚು ತಿಂಗಳು ಕಾರ್ಯಾನುಭವ ಇದ್ದಲ್ಲಿ – 20 ಅಂಕಗಳು (ಉದಾಹರಣೆಗೆ ಒಂದು ತಿಂಗಳ ಕಾರ್ಯಾನುಭವಕ್ಕಾಗಿ 0.56 ಅಂಕದಂತೆ, 10 ತಿಂಗಳ ಅನುಭವ ಹೊಂದಿದ್ದಲ್ಲಿ, 10*0.56 = 5.60 ಅಂಕ ನೀಡಲಾಗುವುದು).

**ಆಯ್ಕೆ ಪ್ರಕ್ರಿಯೆ :**

- ಮೇಲಿನಂತೆ ತಯಾರಿಸಿದ ಮೆರಿಟ್ ಪಟ್ಟಿಯನ್ನು ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ / **davanagere.nic.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು ಒಂದು ವಾರದ ಕಾಲವಕಾಶ ನೀಡಲಾಗುವುದು.
- ಆಕ್ಷೇಪಣೆ ಪ್ರಕ್ರಿಯೆ ನಂತರ, ಮೆರಿಟ್ ಪಟ್ಟಿಯನ್ನು ಅವಶ್ಯವಿರುವ ಹುದ್ದೆಗನುಗುಣವಾಗಿ ಅನುಪಾತ 1:3 ರಂತೆ Short list ನ್ನು ತಯಾರಿಸಲಾಗುವುದು.
- ಶಾರ್ಟ್ ಲಿಸ್ಟ್‌ನಲ್ಲಿರುವ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆಗೆ ಅಭ್ಯರ್ಥಿಗಳನ್ನು ಜಿಲ್ಲಾ ಪಂಚಾಯತ್‌ಗೆ ಆಹ್ವಾನಿಸಿ ಮೂಲ ದಾಖಲೆಗಳ ಪರಿಶೀಲನೆ ನಡೆಸಲಾಗುವುದು. ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನಾ ದಿನಾಂಕವನ್ನು ಇ-ಮೇಲ್ / ದೂರವಾಣಿ ಮೂಲಕ ತಿಳಿಸಲಾಗುವುದು.
- ಒಂದು ವೇಳೆ ಮೆರಿಟ್ ಶಾರ್ಟ್ ಲಿಸ್ಟ್‌ನಲ್ಲಿರುವ ಅಭ್ಯರ್ಥಿಗಳು ದಾಖಲಾತಿ ಪರಿಶೀಲನೆಗೆ ಅಥವಾ ಕರ್ತವ್ಯಕ್ಕೆ ಹಾಜರಾಗದೇ ಇದ್ದಲ್ಲಿ, ಮೆರಿಟ್ ಪಟ್ಟಿಯಲ್ಲಿರುವ (Waiting list) ಮುಂದಿನ ಅಭ್ಯರ್ಥಿಗಳನ್ನು ಹುದ್ದೆಯ ನೇಮಕಾತಿಗೆ ಪರಿಗಣಿಸಲಾಗುವುದು.
- ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ, ಕನ್ನಡ ಮತ್ತು ಇಂಗ್ಲೀಷ್ ಭಾಷೆ ತಿಳಿದಿರಬೇಕು.
- ತಾಂತ್ರಿಕ ಸಹಾಯಕ ಹುದ್ದೆಯ ನೇಮಕಾತಿಗೆ ಯಾವುದೇ ನೇರ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ಇರುವುದಿಲ್ಲ.
- ಆಡಳಿತ ಸಹಾಯಕ ಹುದ್ದೆಗೆ ಮೆರಿಟ್ ಶಾರ್ಟ್ ಲಿಸ್ಟ್‌ನಲ್ಲಿರುವ ಅಭ್ಯರ್ಥಿಗಳನ್ನು ಕನ್ನಡ ಮತ್ತು ಇಂಗ್ಲೀಷ್ ಟೈಪಿಂಗ್ ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಪ್ರಾಯೋಗಿಕವಾಗಿ ಪರೀಕ್ಷೆ ನಡೆಸಿ ಆಯ್ಕೆ ಮಾಡಲಾಗುವುದು.
- ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾದ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಸಂಸ್ಥೆ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುವುದು. ನೇಮಕಾತಿಯ ಅವಧಿಯು 11 ತಿಂಗಳಾಗಿದ್ದು, ಅಭ್ಯರ್ಥಿಗಳ ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.
- ಅಂತಿಮ ಆಯ್ಕೆ ಪಟ್ಟಿ ಅನುಮೋದಿಸುವುದು ಅಥವಾ ರದ್ದುಪಡಿಸುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ತೀರ್ಮಾನವಾಗಿರುತ್ತದೆ.
- ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಪಂಚಾಯತ್ ಕಚೇರಿಯ ನರೇಗಾ ವಿಭಾಗ ಅಥವಾ ಜಿಲ್ಲಾ ಪಂಚಾಯತ್ ಕಚೇರಿಯ ಉಚಿತ ಸಹಾಯವಾಣಿ ಸಂಖ್ಯೆ **1800 425 2203** ಗೆ ಕರೆ ಮಾಡುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಜಿಲ್ಲಾ ಪಂಚಾಯತ್, ದಾವಣಗೆರೆ.



Scanned with OKEN Scanner